
ಕಾನನ
ಜೂನ್ 2017
ನಿಸರ್ಗದೆಡೆಗೆ ಪಯಣ
BANNERUGHATTA
WILDLIFE
CONSERVATION
GROUP

# ಕಾನನ

## ನಿಸರ್ಗದೆಡೆಗೆ ಪಯಣ

### ಮುಖಪುಟ

**ಕಪ್ಪು ಬೆನ್ನಿನ ಮರಕುಟಿಗ**



ಚಳಿ ಚಳಿ ಕೊರೆಯುವ ನೀರಲ್ಲಿ ಮಿಂದು, ಆಕಾಶಕ್ಕೆ ಮುಖಮಾಡಿ ಎಳೆ ಬಿಸಿಲು ಕಾಯುತ್ತಿರುವ ಈ ಜೋಡಿ ಕೂರ್ಮಗಳು. ಕೆರೆ–ನದಿ ಮೊದಲಾದ ಸಿಹಿನೀರಿನ ಆವಾಸಗಳಲ್ಲಿ ಜೀವಿಸುತ್ತವೆ. ಈ ಆಮೆಗಳು ಸರಿಸೃಪ ಗುಂಪಿಗೆ ಸೇರುವ ಶೀತರಕ್ತ ಜೀವಿಗಳಾಗಿವೆ. ದೇಹದ ಮೇಲ್ಭಾಗದಲ್ಲಿ ಚಿಪ್ಪಿನಂತ ಗಟ್ಟಿಯಾದ ರಚನೆ ಇದೆ. ಇವು ತನಗೆ ಅಪಾಯ ಬಂದಾಗ ತನ್ನ ತಲೆ ಮತ್ತು ಕಾಲುಗಳನ್ನು ಚಿಪ್ಪಿನೊಳಗೆ ಎಳೆದುಕೊಂಡು ರಕ್ಷಿಸಿಕೊಳ್ಳುತ್ತವೆ . ಇವುಗಳ ಚಿಪ್ಪಿನಲ್ಲಿ ಇರುವ ಬೆನ್ನುಮೂಳೆಯ ಸಹಾಯದಿಂದ ಇವುಗಳನ್ನು ಕಶೇರುಕಗಳು (Vertebrate) ಎನ್ನಬಹುದು.

© Karthik AK

ಜೂನ್ 2017

WILDLIFE
CONSERVATION
GROUP

* ಪ್ರಸೇನ ಮತ್ತು ಸಿಂಹ
* ದೊಡ್ಡ ಕಿತ್ತಳೆ ತುದಿ
* ಪಾತಾಳಗಂಗೆಯ ಪಳಯುಳಕೆ ನೀರು ಮತ್ತು ಮಾಲಿನ್ಯ
* ಅರುಣನ ಹಿರಿಮೆ (ಕವನ)
* ಪ್ರಕೃತಿ ಬಿಂಬ



**ಲೇಖಕ ವೃಂದ**

ಕಲುಬಿ ಬ್ರದರ್ಸ್

ಮಹದೇವ .ಕೆ .ಸಿ

ಶಂಕರಪ್ಪ .ಕೆ .ಪಿ

ನಂದಕುಮಾರ್ ಹೊಳ್ಳ

ಕಾರ್ತಿಕ್ .ಎ .ಕೆ

**ವಿನ್ಯಾಸ**

ಅಶ್ವಥ .ಕೆ.ಎನ್

**ಮುಖಪುಟ ಛಾಯಾಚಿತ್ರ**

ಕಾರ್ತಿಕ್ .ಎ .ಕೆ

**ಪರಿಷ್ಕರಣೆ**

ಮುರಳಿ .ಎಸ್

ನಾಗೇಶ್ .ಓ .ಎಸ್

**ಕರಡು ತಿದ್ದುಪಡಿ**


ಡಾ.ದೀಪಕ್ ಭದ್ರಶೆಟ್ಟಿ, ಮೈಸೂರು



© ವಿಪಿನ್ ಬಾಳಿಗ

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

ಮಳೆಗಾಲದಲ್ಲಿ ಮೋಡ ಕವಿದ ವಾತಾವರಣದಲ್ಲಿ ಸುತ್ತಲು ಹಚ್ಚ ಹಸಿರಾದ ಕಾಡಿನಿಂದ ಸುತ್ತುವರೆದಂತಹ ಬೆಟ್ಟವು ಒಂದೇ ಕಲ್ಲಿನಿಂದ ಮಾಡಲ್ಪಟ್ಟದಿಯೊ ಎಂಬಂತೆ ಭಾಸವಾಗುತ್ತದೆ. ಸಾವಿರಾರು ವರುಷಗಳಿಂದ ಮಳೆ, ಗಾಳಿ, ಬಿಸಿಲಿಗೆ ಕಲ್ಲುಬಂಡೆ ಕೊರೆದು ಒಂದು ಸಣ್ಣ ಕೆರೆಯಾಗಿದೆ, ಆ ಕೆರೆಯಲ್ಲಿ ಒಂದಿಷ್ಟು ನೀರು ನಿಂತು ಆ ನೀರನ್ನು ಅವಲಂಬಿಸಿ ನಾಲ್ಕಾರು ಜಾತಿಯ ಕಾಡು ಸಸ್ಯಗಳು ಅಲ್ಲಿ ಬೆಳೆದಿವೆ. ನೀರಿಗಾಗಿ ಒಮ್ಮೊಮ್ಮೆ ಕಾಡು ಪ್ರಾಣಿಗಳು ಬರುವುದು ಸಹಜ.



# ಪ್ರಸೇನ ಮತ್ತು ಸಿಂಹ

ಗಣೇಶ ಹಬ್ಬದ ಸಂಜೆ ವಿಸರ್ಜನೆಗೂ ಮೊದಲು ಸ್ಯಮಂತ/ಶಮಂತಕೋಪಖ್ಯಾನವನ್ನು ಓದುವುದು ಒಂದು ಕ್ರಮ. ಒಮ್ಮೆ ಅದನ್ನು ಓದುವ ಅವಕಾಶ ನನಗೆ ಒದಗಿ ಬಂತು. ಕಥೆಯನ್ನು ಓದುತ್ತ ಸ್ಯಮಂತಕ ಮಣಿಯು ಪ್ರಸೇನನ ಕೈಗೆ ಬಂದು ಸೇರಿತ್ತು. ಪ್ರಸೇನನು ಸ್ಯಮಂತಕ ಮಣಿಯ ಸಮೇತನಾಗಿ ಕುದುರೆ ಏರಿ ಬೇಟೆಗೆ ಹೊರಟನು, ಎಂಬ ಸಾಲು ಮುಗಿಯುವುದರೊಳಗೆ ನನಗೇ ಅರಿವಿಲ್ಲದೆ ನನ್ನ ಕಲ್ಪನೆಯ ಕುದುರೆಯನ್ನೇರಿ ಪ್ರಸೇನನನ್ನು ಹಿಂಬಾಲಿಸತೊಡಗಿದ್ದೆ.

ಕಥೆಯಲ್ಲಿ ಬರುವ ಬೇಟೆಯ ಪ್ರಸಂಗ ಹಾಗೂ ಸುತ್ತಲಿನ ಪರಿಸರವನ್ನು ವರ್ಣಿಸುತ್ತ ಹೋಗುವ ಪದಗಳನ್ನು ನನ್ನ ಮನಸ್ಸು ಚಿತ್ರೀಕರಿಸುತ್ತ ಸಾಗಿತ್ತು. ಕುದುರೆ, ಅದರ ಓಟದ ವೇಗ, ಖರಪುಟದ ಸದ್ದು, ಪ್ರಸೇನ ಮತ್ತವನ ಜೊತೆಗಾರರ ಉತ್ಸಾಹ ಕೇಕೆ ಎಲ್ಲವೂ ಮುಗಿಲು ಮುಟ್ಟಿತ್ತು. ಇವರ ಕೂಗಾಟ, ಆರ್ಭಟಕ್ಕೆ ಕಾಡು ಒಡೆದ ಗಾಜಿನಂತಾಗಿತ್ತು. ಕೃಷ್ಣಮೃಗ, ಚಿಂಕಾರ, ಕಾಡುಹಂದಿ, ಮೊಲಗಳು ಎಲ್ಲವೂ ದಿಕ್ಕಾಪಾಲಾಗಿ ಓಡಲಾರಂಭಿಸಿದುವು, ಮಂಗಗಳು, ಅಳಿಲುಗಳು ಮರವನ್ನೇರಿ ಕೂಗಾಡುತ್ತ, ಚೀರಾಡುತ್ತ ತಮ್ಮ ಆತಂಕವನ್ನು ಬಂದೊದಗಿರುವ ಅಪಾಯವನ್ನು ಕಾಡಿನ ಅಂಚು ಅಂಚಿಗೆ ಸಾರಿದವು. ದೂರದ ದಿಬ್ಬದ ಮೇಲೆ ಕುಳಿತಿದ್ದ ಚಿರತೆ, ಕೆಲ ಹೊತ್ತು ಇವರ ಬರುವನ್ನು ಗಮನಿಸಿ, ಅಪಾಯವನ್ನರಿತು ತಲೆ ತಗ್ಗಿಸಿ ಮರಿಗಳನ್ನು ಕರೆದುಕೊಂಡು ಹತ್ತಿರದ ಪೊದೆಯಲ್ಲಿ ಮರೆಯಾಯಿತು. ಚಿರತೆಯೊಂದು ಎತ್ತರದ ಮರವನ್ನೇರಿ ಕೊಂಬೆಯ ಮೇಲೆ ಆತುಕೊಂಡು, ಕೆಳಗಿನ ದಾರಿಯಲ್ಲಿ ಪ್ರಸೇನ ಮತ್ತವನ ತಂಡ ಧೂಳೆಬ್ಬಿಸಿ ಸಾಗುತ್ತಿದ್ದುದನ್ನು ನೋಡುತ್ತಿತ್ತು.

ಇವರ ಬೇಟೆಯ ಉದ್ದೇಶವೇನು? ಯಾವ ಪ್ರಾಣಿಯ ಬೇಟೆಗೆ ಹೊರಟಿದ್ದಾರೆ? ಒಂದೂ ತಿಳಿಯದಾದೆ.

ಪ್ರಸೇನನನ್ನೇ ಕೇಳೋಣವೆಂದರೆ ಶರವೇಗದಲ್ಲಿ ನುಗ್ಗುತ್ತಿರುವ ತಂಡದ ಮೊನಚಿನಲ್ಲಿದ್ದಾನೆ. ಹಾಂ... ಇಲ್ಲಿ ಒಬ್ಬ ಮೂತ್ರ ವಿಸರ್ಜನೆಗೆಂದು ಹಿಂದೆ ಉಳಿದಿದ್ದಾನೆ, ಅವನನ್ನೇ ಕೇಳಿದರಾಯಿತು. ಅಯ್ಯಾ, ಪ್ರಸೇನ ಏನ್ ಬೇಟೆ ಆಡೋಕೆ ಹೋಗ್ತಿದಾನೆ?... ಅವನಿಂದ ಉತ್ತರಬರಲಿಲ್ಲ, ರೀ ಸ್ವಾಮಿ, ಏನ್ ಬೇಟೆ ಅಡೋಕೆ ಹೋಗ್ತಿದೀರಿ? ಎಲಾ ಇವ್ನಾ, ಮಾರಾಯ ಕೇಳಿಸ್ತಿಲ್ವಾ, ಏನ್ ಬೇಟೆ, ಇನ್ನು ಎಷ್ಟು ದೂರಾ ಅಂದೆ? ಇಲ್ಲಾ ಈ ಮಹಾಶಯನಿಗೆ ನನ್ನ ಮಾತು ಕೇಳಿಸ್ತಿಲ್ಲ. ಗುಂಪಿನಲ್ಲಿ ವೀರಾವೇಷದಿಂದ ಮುನ್ನುಗ್ಗುತ್ತಿದ್ದವ, ಬಹಿರ್ದೆಸೆಗೆ ಹಿಂದುಳಿದದ್ದೇ ಗಾಭರಿಗೊಂಡಂತೆ ಕಾಣಿಸ್ತಿದಾನಲ್ಲಾ. ಕಾಡಿನ ನೀರವ ಮೌನ, ತನ್ನದಲ್ಲದ ಜಾಗದ ಅನುಭವ ಒಂದು ರೀತಿಯ ಭಯವನ್ನುಂಟುಮಾಡಿರಬೇಕು. ಕುದುರೆ ಏರುವ ಮೊದಲೇ ಹೊಯ್, ಹೊಯ್ ಅಂತ ಕೂಗ್ತಿದಾನೆ. ಕುದುರೆಗೂ ಭಯವಾಗಿತ್ತೇನೊ, ಮತ್ತೆಲ್ಲೂ ನಿಲ್ಲವುದಿಲ್ಲವೇನೋ ಎಂಬಂತೆ ಓಡುತ್ತಿದೆ.

ನಾನು ಈ ಆಸಾಮಿ ಹತ್ರ ವಿಷಯ ತಿಳಿಯುವ ಅಂತ ನಿಂತು ಹೊರಡೋ ಹೊತ್ತಿಗೆ, ಆ ಕಡೆ ಪ್ರಸೇನನ ಕುದುರೆ ಕುಸಿದು ಬಿದ್ದಿದೆ. ಅದರ ಉಸಿರಾಟದ ಸದ್ದು ಬಹು ಜೋರಾಗಿಯೇ ಕೇಳಿಸುತ್ತಿದೆ. ದೇಹದಲ್ಲಿ ಚಲನೆಯಿಲ್ಲ, ಕಣ್ಣುಗಳನ್ನು ದೊಡ್ಡದಾಗಿ ಬಿಟ್ಟುಕೊಂಡು ಪ್ರಸೇನನನ್ನೇ ನೋಡುತ್ತಿದಿಯೇನೋ ಅನ್ನಿಸುತ್ತಿದೆ. ಅಷ್ಟರಲ್ಲಿ ತಂಡದಲ್ಲಿದ್ದವರು, ಕುದುರೆಯ ಅನಾರೋಗ್ಯದ ಹೊರತಾಗಿಯೂ ಪ್ರಸೇನನು ಪಟ್ಟದ ಕುದುರೆಯೇ ಬೇಕೆಂದು ಕರೆತಂದನೆಂದು ಗುಸುಗುಸು ಮಾತನಾಡುತ್ತಿದ್ದುದು ಕೇಳಿಸಿತು. ಪ್ರಸೇನ ಹೀಗೇಕೆ ಮಾಡಿದ, ಅನ್ಯಾಯವಾಗಿ ಕುದುರೆ ಸಾಯಬೇಕಾಗಿ ಬಂತು, ಅಂದುಕೊಂಡೆ.



ಈ ಘಟನೆಯ ನಂತರ ಪ್ರಸೇನನು ವಿಚಲಿತನಾದಂತೆ ಕಂಡ. ತಂಡದಲ್ಲಿಯೂ ಹೆಚ್ಚು ಹುಮ್ಮಸ್ಸು ಉಳಿದಂತೆ ಕಾಣಲಿಲ್ಲ. ನಿಧಾನವಾಗಿ ಸಾಗುತ್ತಿದ್ದ ತಂಡವು, ಹೆಚ್ಚು ದೂರ ಸಾಗಿರಲಿಲ್ಲ, ತಂಡದಲ್ಲಿದ್ದ ಬೇಟೆ ನಾಯಿಗಳು ಅದ್ಯಾವ ವಾಸನೆ ಹಿಡಿದವೋ, ಒಮ್ಮೆಲೆ ಬೊಗಳುತ್ತಾ ತಮ್ಮ ಮುಂದಿದ್ದ ದಿಬ್ಬವನ್ನು ಬಳಸಿ ದಿಬ್ಬದ ಇನ್ನೊಂದು ಬದಿಗೆ ಹೋದವು. ಕ್ಷಣಾರ್ಧದಲ್ಲೇ ನೋಡು ನೋಡುತ್ತಿದ್ದಂತೆ ದೊಡ್ಡ ಘರ್ಜನೆಯೊಂದು ಕೇಳಿಸಿತು. ದಿಬ್ಬದ ಇನ್ನೊಂದು ಬದಿಗೆ ಹೋದ ನಾಯಿಗಳು ಕೆಟ್ಟದಾಗಿ ಚೀರಲಾರಂಭಿಸಿದುವು. ಮತ್ತೆಲ್ಲ ಮೌನ, ಏನಾಗುತ್ತಿದೆ ಎಂದೇ ಊಹಿಸಲಾಗುತ್ತಿಲ್ಲ. ಎಲ್ಲರೂ ಒಬ್ಬರ ಮುಖ ಒಬ್ಬರು ನೋಡುತ್ತ ತಮ್ಮ ಆಯುಧಗಳನ್ನು ಎತ್ತಿಹಿಡಿದು ಆಕ್ರಮಣ ಮಾಡುವ ಭಂಗಿಯಲ್ಲಿ ನಿಂತರು. ತಂಡದಲ್ಲಿ ಯಾರಿಗೂ ಮಾತನಾಡುವ ಧೈರ್ಯವಿರಲಿಲ್ಲ. ಎಲ್ಲರೂ

ಪ್ರಸೇನನ ಆಜ್ಞೆಗಾಗಿ ಕಾಯುತ್ತಿದ್ದಾರೆ. ಪ್ರಸೇನನೂ ಏನು ಮಾಡುವುದೆಂದು ತೋಚದವನ ಹಾಗೆ ಕಂಡ. ಪ್ರಸೇನನಿಂದ ಆಜ್ಞೆ ಬಂತು, "ಸೇನಾಪತಿ ತಂಡದ ಮುಂದಾಳತ್ವವನ್ನು ವಹಿಸುವುದು, ಹಾಗೂ ತನ್ನ ಮುಂದಿನ ಸೂಚನೆ ಬರುವವರೆಗೆ ಇಲ್ಲಿಯೇ ಕಾಯುವುದು" ಎಂದು ಹೇಳಿ ದಿಬ್ಬದ ಆ ಬದಿಗೆ ಹೆಜ್ಜೆ ಹಾಕಿದ. ಪ್ರಸೇನನ ಕಣ್ಣುಗಳಲ್ಲಿ ತನ್ನ ಪ್ರೀತಿಯ ಪಟ್ಟದ ಕುದುರೆಯ ತಾನೇ ಕೊಂದೆ ಎಂಬ ಭಾವ ಇನ್ನೂ ಸುಳಿದಾಡುತ್ತಿತ್ತು, ಕಣ್ಣುಗಳಲ್ಲಿ ತೇವ ಹಾಗೆಯೇ ಇತ್ತು. ಗೊಂದಲದ ಗೂಡಿನಂತೆ ಕಂಡ ಪ್ರಸೇನ, ತಾನು ಯಾವ ಕೆಲಸಕ್ಕೆ ಹೋಗುತ್ತಿರುವೆನೆಂಬ ಅರಿವೇ ಇಲ್ಲದವನಂತೆ ನಡೆದ. ಎಡಗೈಯಲ್ಲಿನ ಬಿಲ್ಲು, ಬಲಗೈಯಲ್ಲಿನ ಬಾಣ ನೆಲವನ್ನೇ ನೋಡುತ್ತಿದ್ದವು.




ನನಗೆ, ಆತಂಕ ಶುರುವಾಯಿತು, "ಪ್ರಸೇನ ಜಾಗ್ರತೆ..." ಅಂದೆ, ಅವನಿಗದು ಕೇಳಿಸಲಿಲ್ಲ. ನಾನು ಸರಸರನೆ ಪ್ರಸೇನನನ್ನು ಹಿಂಬಾಲಿಸಿದೆ. ನನ್ನ ಎದುರಿಗೆ, ಬೃಹದಾಕಾರವಾದ ಸಿಂಹವೊಂದು ಕೂತಿದೆ. ತನ್ನ ಕೇಸರವನ್ನೆಲ್ಲ ನಿಮಿರಿಸಿಕೊಂಡು, ತನ್ನ ದೇಹದ ಮುಂಭಾಗವನ್ನು ತಗ್ಗಿಸಿ, ತಲೆಯನ್ನು ಮುಂದಕ್ಕೆ ಚಾಚಿ ನಿಧಾನವಾಗಿ ಹಿಂಗಾಲುಗಳನ್ನು ಎತ್ತಿಡುತ್ತ, ಬಾಲವನ್ನು ಸ್ವಲ್ಪ ಮೇಲಕ್ಕೆ ಎತ್ತಿ ತಿರುಗಿಸುತ್ತ ಪ್ರಸೇನನಮೇಲೆ ಎರಗಲು ಕಾಯುತ್ತಿದ್ದೆ. ನಾಯಿಗಳು ಬಂದಿದ್ದರಿಂದಲು, ಮನುಷ್ಯರ ಓಡಾಟದ ಸದ್ದು ಕೇಳಿಸಿದ್ದರಿಂದಲೂ ಸಿಂಹವು ಆದಾಗಲೇ ಎಚ್ಚೆತ್ತುಕೊಂಡಿತ್ತು.

ಪ್ರಸೇನ..., ಸಿಂಹಾ..., ಎಂದು ನಾನು ಜೋರಾಗಿ ಕೂಗಿದೆ, ಅಷ್ಟರಲ್ಲಿ ಸಿಂಹವು ಪ್ರಸೇನನಮೇಲೆ ಎರಗಿತ್ತು, ಗಾಳಿಗೆ ತರಗೆಲೆ ಉರುಳಿದಂತೆ ಪ್ರಸೇನ ನೆಲಕ್ಕುರುಳಿದ. ಸಿಂಹಕ್ಕೆ ಯಾವ ಪ್ರತಿರೋಧವನ್ನೂ ಅವನು ಒಡ್ಡಲಾಗಲಿಲ್ಲ. ಕಣ್ಣೆದುರೇ ಪ್ರಸೇನ ನಿಶ್ಚಲನಾದ. ನೆಲದಮೇಲೆ ಬಿದ್ದಿದ್ದ ನಾಯಿಗಳ ರಕ್ತದೊಂದಿಗೆ ಪ್ರಸೇನನ ರಕ್ತವು ಸೇರಿಹೋಯಿತು. ಸಿಂಹವು ಪ್ರಸೇನನನ್ನು ಎಳೆದುಕೊಂಡು ಹೊರಟಿತು.

ಇತ್ತ ದಿಬ್ಬದ ಹಿಂದೆ ಪ್ರಸೇನನ ಸೂಚನೆಗಾಗಿ ಕಾಯುತ್ತಿದ್ದವರ ಮುಖದಲ್ಲಿ ಗೊಂದಲ, ಗಾಬರಿಗಳು ಇನ್ನೂ ಮನೆ ಮಾಡಿಯೇ ಇದ್ದವು. ಅವರಿಗೆ, ಸಿಂಹದ ಘರ್ಜನೆ, ಏನೋ ಬಿದ್ದ ಸದ್ದು ಬಿಟ್ಟರೆ ಬೇರೇನೂ ಅರಿವಿಗೆ ಬಂದಂತಿರಲಿಲ್ಲ.

ನಾನು ಕೂಡಲೇ ಸಿಂಹವನ್ನು ಹಿಂಬಾಲಿಸತೊಡಗಿದೆ. ಸಿಂಹವು, ದೊಡ್ಡದಾಗಿದ್ದರೂ ಅದರ ಸ್ನಾಯುಗಳಲ್ಲಿ ಬಲವಿಲ್ಲದಂತೆ ಕಂಡಿತು. ಪ್ರಸೇನನನ್ನು ಎಳೆದುಕೊಂಡು ಹೋಗಲು ಪ್ರಯಾಸ ಪಡುತ್ತಿರುವಂತೆ ಕಂಡಿತು. ಸ್ವಲ್ಪ ದೂರದಲ್ಲಿಯೇ ಇದ್ದ ತೊರೆಯ ಬಳಿಯ ಪೊದೆಯಲ್ಲಿ ಪ್ರಸೇನನ ದೇಹವನ್ನು ಇಟ್ಟು ಸಿಂಹವು ತನ್ನ ನಾಲಿಗೆಯನ್ನು ಚಾಚಿ ಜೋರಾಗಿ ಉಸಿರೆಳೆದು ಕೊಳ್ಳುತ್ತ ಸುಧಾರಿಸಿಕೊಳ್ಳುತ್ತಿತ್ತು. ಅರೆ, ಸಿಂಹದ ಒಂದು ಹಲ್ಲು ಮುರಿದು ಹೋಗಿದೆ, ಉಳಿದ ಹಲ್ಲುಗಳುಕೂಡ ಬಲಿ ಪ್ರಾಣಿಯನ್ನು ಹಿಡಿದು, ಮೂಳೆಯನ್ನು ಮುರಿಯುವಷ್ಟು ಮೊನಚಾಗಿಲ್ಲ! ಮೈಮೇಲಿನ ಕೂದಲು ತನ್ನ ಹೊಳಪನ್ನು ಕಳೆದುಕೊಂಡಿದೆ. ಕೂದಲು ಅಲ್ಲಲ್ಲಿ ಉದುರಿ ದೇಹವು ಹುಳು ತಿಂದಂತೆ ಕಾಣುತ್ತಿದೆ. ಓಹ್..., ಈಗ ಎಲ್ಲ ಗೊತ್ತಾಯ್ತು, ಜನರ ಸದ್ದು ಗದ್ದಲ ಕೇಳಿಯೂ ಯಾಕೆ ಸಿಂಹ ಓಡಿಹೋಗಲಿಲ್ಲ, ಬದಲಿಗೆ ಜನರು ಬರುವುದನ್ನೇ ಹೊಂಚು ಹಾಕಿ ಕುಳಿತದ್ದೇಕೆ... ಎಲ್ಲಕ್ಕೂ ಉತ್ತರ ಸಿಕ್ಕಿತು. ವಯೋ ಸಹಜ ನಿಶ್ಯಕ್ತಿಯಿಂದ, ದೌರ್ಬಲ್ಯದಿಂದ ಸೊರಗಿದ್ದ ಸಿಂಹಕ್ಕೆ ಕಾಡು ಪ್ರಾಣಿಗಳನ್ನು ಬೇಟೆಯಾಡುವುದು ಕಷ್ಟವಾಗಿದೆ. ಹಾಗಾಗಿ ಅದು ನರಭಕ್ಷಕನಾಗಿ ಮಾರ್ಪಾಟಾಗಿ, ಹತ್ತಿರದ ಹಳ್ಳಿಗರಿಗೆ, ದನಗಾಹಿಗಳಿಗೆ ಪಿಡುಗಾಗಿ ಪರಿಣಮಿಸಿದೆ. ಹಳ್ಳಿಗರು ತಮ್ಮ ಒಡೆಯನಲ್ಲಿ ನರಭಕ್ಷಕನ ಕಾಟವನ್ನು ತಡೆಯುವ ಮನವಿ ಮಾಡಿದ್ದಾರೆ. ಜನರ ಸಮಸ್ಯೆಯನ್ನರಿತ ಪ್ರಸೇನನು ನರಭಕ್ಷಕನ ಬೇಟೆಗೆ ಬಂದಿದ್ದಾನೆ.... ಎಲ್ಲ ತಿಳಿಯಿತು. ಆದರೆ ಪ್ರಸೇನನೇ ಬಲಿಯಾಗಿದ್ದು ದುರಂತವೇ ಅನ್ನಿಸಿತು. ಅವನ ಅಜಾಗರೂಕತೆ, ಪೂರ್ವ ಸಿದ್ಧತೆಯಲ್ಲಿನ ಲೋಪ ಅವನ ಅಂತ್ಯಕ್ಕೆ ಕಾರಣವಾದವಲ್ಲ ಎಂದು ಬೇಸರವಾಯಿತು.



ಸಿಂಹವು ಇನ್ನೂ ಸುಧಾರಿಸಿಕೊಳ್ಳುತ್ತಿತ್ತು, ತೊರೆಯ ಮತ್ತೊಂದು ಬದಿಯಲ್ಲಿ ಕಟ್ಟು ಮಸ್ತಾದ ಕರಡಿಯೊಂದು ತನ್ನೆರಡು ಕಾಲುಗಳಮೇಲೆ ನಿಂತು ಸಿಂಹವನ್ನೇ ನೋಡುತ್ತಿದೆ. ಕರಡಿ ಮತ್ತು ಸಿಂಹದ ನಡುವೆ ಹೆಚ್ಚು ದೂರವಿಲ್ಲ, ಎರಡು ಅಥವಾ ಮೂರು ಜಿಗಿತಕ್ಕೆ ಕರಡಿ ಸಿಂಹವಿದ್ದಲ್ಲಿಗೆ ಬಂದು ತಲಪಬಹುದು. ಕರಡಿ, ಸ್ವಲ್ಪ ಆಕಡೆ ಈಕಡೆ ಓಡಾಡಿ ಸಿಂಹವನ್ನು ದೂರದಿಂದಲೇ ಅಂದಾಜು ಮಾಡಿ ದಾಳಿಗೆ ಯೋಗ್ಯವೋ ಇಲ್ಲ ಪಲಾಯನವೇ ಸೂಕ್ತವೋ ಎಂದು ಲೆಕ್ಕ ಹಾಕುತ್ತಿರುವಂತೆ ಕಂಡಿತು. ಅತ್ತಿತ್ತ ಒಂದೆರಡು ಬಾರಿ ಸುಳಿದಾಡಿ ಗಾಳಿಯನ್ನು ಮೂಸಿದ ಕರಡಿ ಒಮ್ಮೆಲೇ ಸಿಂಹದಮೇಲೆರಗಿತು. ಸಿಂಹವೂ ಜೋರಾಗಿ ಘರ್ಜಿಸುತ್ತ ಛಂಗನೆ ಜಿಗಿದು ತನ್ನ ಬಲವಿಲ್ಲದ ಕಾಲುಗಳಮೇಲೆ

ಅದರುತ್ತ ನಿಂತಿತು. ಒಂದೆರಡು ಬಾರಿ ಕರಡಿಯನ್ನು ಹಿಮ್ಮೆಟ್ಟಿಸುವ ಪ್ರಯತ್ನ ಮಾಡಿತಾದರೂ, ಅದರ ವಯಸ್ಸು ಅದಕ್ಕೆ ಜೊತೆಕೊಡಲಿಲ್ಲ. ಕರಡಿಯು, ಸಿಂಹದ ಸ್ಥಿತಿಯ ಪೂರ್ಣ ಲಾಭ ಪಡೆದು, ತನ್ನೆರಡು ಕೈಗಳಿಂದ ಸಿಂಹದ ಮುಖಕ್ಕೆ ಬಲವಾಗಿ ಹೊಡೆಯಿತು. ಅಷ್ಟೆ, ಸಿಂಹ ಮತ್ತೆ ಮೇಲೇಳಲಿಲ್ಲ.

ಮಿಶ್ರಾಹಾರಿಯಾದ ಕರಡಿಯು, ಸುಲಭದಲ್ಲಿ ದೊರೆತ ಪ್ರಸೇನನ ಕಳೆಬರವನ್ನು ಎಳೆದುಕೊಂಡು ಹೋಯಿತು. ಹಾಗೆ ಹೋಗುವಾಗ ರಕ್ತಸಿಕ್ತವಾಗಿದ್ದ ಸ್ಯಮಂತಕಮಣಿಯು ತೊರೆಯ ನೀರಿನಲ್ಲಿ ರಕ್ತದ ಕಲೆಗಳನ್ನು ಕಳೆದುಕೊಂಡು ಮತ್ತೆ ಹೊಳೆಯಿತು. ಬಾನಿನಲ್ಲೂ, ಭೂಮಿಯಲ್ಲೂ ಏಕಕಾಲಕ್ಕೆ ಸೂರ್ಯನುದಯಿಸಿದಹಾಗೆ ಪ್ರಖರವಾದ ಬೆಳಕು ಎಲ್ಲೆಡೆ ಚೆಲ್ಲಿತು. ಬೆಳಕಿನ ತೀವ್ರತೆಗೆ ನನ್ನ ಕಣ್ಣುಗಳು ಮುಚ್ಚಿಕೊಂಡವು.

ಕಣ್ಣು ತೆರೆದೆ, ಎದುರಿಗೆ ಅಮ್ಮ, ಅಪ್ಪ, ಚೇತನ್, ಗೌರಿ ಎಲ್ಲ ಕೂತಿದ್ದರು. ಸ್ಯಮಂತಕೋಪಖ್ಯಾನ ಓದುವುದನ್ನು ನಿಲ್ಲಿಸಿ, ಚೇತನ್, ನೋಡಿದ್ಯಾ..., ಸಿಂಹ-ದ್ವಾರಕೆ-ಗುಜರಾತ್ ಎಂಥಾ ಒಳ್ಳೆ ಡಾಕ್ಯುಮೆಂಟ್ ಅಲಾ ಎಂದು ನಕ್ಕೆ, ಅದಕ್ಕವನು ಹೌದು ಎಂಬಂತೆ ತಲೆ ತೂಗಿದ.

ಗಣಪತಿ ವಿಸರ್ಜನೆ ಮುಗಿಸಿಬಂದು ಕಡಬು ತಿನ್ನುತ್ತ ಕುಳಿತಿದ್ದೆ, ಮನಸ್ಸು ಮತ್ತೆ ಪ್ರಸೇನ ಮೃತಪಟ್ಟ ಜಾಗಕ್ಕೆ ಹೋಯಿತು... ಒಂದು ಅನುಮಾನ ಸುಳಿಯಿತು, ನರಭಕ್ಷಕನ ಬಗ್ಗೆ ಅವನಿಗೆ ಮಾಹಿತಿ ಇರಲಿಲ್ಲವೊ?! ಇಲ್ಲಾ, ಈ ಮುದಿ ಸಿಂಹಕ್ಕೆ ಮೊದಲ ಮತ್ತು ಕೊನೆಯ ನರಬಲಿ ಪ್ರಸೇನನೇ ಆದನೊ?!!



- ಕಲುಬಿ ಬ್ರದರ್ಸ್

ಶಿವಮೊಗ್ಗ.






# ದೊಡ್ಡ ಕಿತ್ತಳೆ ತುದಿ

ವರ್ಷದಲ್ಲಿ ಒಂದೆರೆಡು ಬಾರಿ ಪಶ್ಚಿಮಘಟ್ಟಗಳ ಕಡೆ ಹೋಗಿ ಬರದಿದ್ದರೆ ಏನೋ ಕಳೆದುಕೊಂಡಂತೆ..!, ಹೀಗೆ ಹೋದ ನವೆಂಬರ್ ತಿಂಗಳಲ್ಲಿ ಬ್ರಹ್ಮಗಿರಿ ಚಾರಣಕ್ಕೆ ಹೋಗಲು ತೀರ್ಮಾನಿಸಿದೆವು. ನಮ್ಮದು ಒಂಬತ್ತು ಜನರ ತಂಡ ಎಲ್ಲರೂ ಬೆಂಗಳೂರಿನಲ್ಲಿ ರಾತ್ರಿ ಬಸ್ ಹತ್ತಿ, ಬೆಳಗಿನ ಜಾವ ಐದು ಗಂಟೆಯ ಸಮಯಕ್ಕೆ ಗೋಣಿಕೊಪ್ಪಲಿಗೆ ತಲುಪಿದೆವು. ಬಸ್ ಇಳಿದು ಅಲ್ಲೆ ಬಸ್ ಸ್ಟಾಂಡಿನಲ್ಲಿದ್ದ ಸಣ್ಣ ಕಾಫಿ ಅಂಗಡಿಗೆ ಹೋಗಿ ಕಾಫಿ ಕುಡಿದು. ಅಲ್ಲಿಂದ ನಮ್ಮ ಪಯಣ ಶ್ರೀಮಂಗಲದ ಕಡೆ ಸಾಗಿತು, ಅಲ್ಲೇ ನಾವು ಚಾರಣಕ್ಕೆ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಬೇಕಿತ್ತು. ನಮ್ಮ ತಂಡಕ್ಕೆ ಬ್ರಹ್ಮಗಿರಿಯ ಬದಲಾಗಿ ಆಬ್ಬೈಲು ಎಂಬಲ್ಲಿ ಚಾರಣಕ್ಕೆ ಅನುಮತಿ ದೊರೆಯಿತು. ಹೊಸ ಜಾಗ ಇರಲಿ ಎಂದು ಒಪ್ಪಿ ಶ್ರೀಮಂಗಲದಲ್ಲೇ ತಿಂಡಿ ಮುಗಿಸಿ ಅಲ್ಲಿಂದ ಸುಮಾರು 18 ಕಿಮಿ ದೂರದ ಆಬ್ಬೈಲುವಿನತ್ತ ಪ್ರಯಾಣ ಬೆಳೆಸಿದೆವು, ದಾರಿಯಲ್ಲಿ ಹೆಜ್ಜೆ ಹೆಜ್ಜೆಗೆ ಸಿಗುತ್ತಿದ್ದ ರೆಸಾರ್ಟ್ ಬೋರ್ಡುಗಳು, ಎರಡು ಬದಿಯ ಟೀ ತೋಟ, ರಸ್ತೆಯ ಏರಿಳಿತಗಳು, ಸಾಗಿದಂತೆ ದಾರಿಯು ದುರ್ಗಮವಾಗ ತೊಡಗಿತ್ತು, ಅಲ್ಲಲ್ಲಿ ಸಿಗುವ ಸಣ್ಣ ಸಣ್ಣ ತೊರೆಗಳನ್ನು ಹಾದು ದಾರಿ ಸಾಗುತ್ತಿದ್ದಂತೆ ಮುಂದೆ ಒಂದು ಬೋರ್ಡ್ ನಮಗೆ ಎದುರಾಯಿತು "ಆಬ್ಬೈಲು ಅರಣ್ಯ ವಲಯ". ಬೋರ್ಡ್ ದಾಟಿ ಮುಂದೆ ಸ್ವಲ್ಪ ದೂರ ಸಾಗುತ್ತಿದ್ದಂತೆ ದೊಡ್ಡದೊಂದು ಮರ ದಾರಿಗೆ ಅಡ್ಡಲಾಗಿ ಬಿದ್ದಿತ್ತು. "ಗಾಡಿ ಮುಂದೆ ಹೋಗುವುದಿಲ್ಲ" ಎಂದು ನಮ್ಮನ್ನು ಕರೆದುಕೊಂಡು ಬಂದಿದ್ದಾತ ಹೇಳಿ "ಓ ಇಲ್ಲೇ ಸ್ವಲ್ಪ ದೂರ ಅಷ್ಟೆ " ಎಂದ. ಎಲ್ಲರೂ ಬ್ಯಾಗುಗಳನ್ನ ಹೆಗಲಿಗೇರಿಸಿ ನಡೆಯಲಾರಂಭಿಸಿದೆವು. ಸ್ವಲ್ಪ ದೂರಕ್ಕೇ ನಮಗೆ ಆಬ್ಬೈಲು ಎಪಿಸಿ ಕ್ಯಾಂಪ್ ಕಣ್ಣಿಗೆ ಬಿತ್ತು ಅಷ್ಟರಲ್ಲಿ ಬಿಸಿಲು ನೆತ್ತಿಗೇರಿ ಚುರುಕು ಮುಟ್ಟಿಸುತ್ತಿತ್ತು.

ಆಬ್ಬೈಲು ಕಾನನದ ನಡುವಲ್ಲಿನ ಒಂದು ಸುಂದರ ತಾಣ. ಚಾರಣಕ್ಕೆ ಬಂದವರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ತಂಗಲು ನಿರ್ಮಿಸಲಾದ ಒಂದು "ಸಣ್ಣಮನೆ" ಎನ್ನಬಹುದು. ಪಕ್ಕದಲ್ಲೇ ಜುಳು ಜುಳು ಹರಿಯುವ ಝರಿ, ಕ್ಯಾಂಪಿನ ಸುತ್ತಲೂ ಹಾಸಿಗೆಯಂತೆ ಬೆಳೆದಿದ್ದ ಹುಲ್ಲು ಸೊಗಸಾಗಿತ್ತು, ಕ್ಯಾಂಪ್ ಸೇರಿದ ನಾವು ಸ್ವಲ್ಪ ವಿರಮಿಸಿದೆವು. ರಾತ್ರಿಗೆ ಬೇಕಾಗುವಷ್ಟು ನೀರನ್ನು ಪಕ್ಕದ ಝರಿಯಿಂದ ಕೆಲವರು ತಂದರೆ, ನಮ್ಮ ಅಶ್ವಥಣ್ಣ ಆ ಹುಲ್ಲು ಹಾಸಿಗೆಯಲ್ಲಿರುವ ಹುಲ್ಲಿನ ಜಾತಿಯ ಸಂಶೋಧನೆಯಲ್ಲಿ ತೊಡಗಿದ್ದರು, ನಾನ ಅಲ್ಲೇ ಹುಲ್ಲು ಹಾಸಿನ

ಮೇಲೆ ಮಲಗಿ ನಿದ್ರೆಗೆ ಜಾರಿದೆ, ಮಧ್ಯಾಹ್ನ ಸುಮಾರು ಮೂರುಗಂಟೆ ಸಮಯ ಎಲ್ಲರು ಸೇರಿ ಅಲ್ಲಿದ್ದ ವಾಚರ್ ಜೊತೆಗೆ ಸಂಜೆ ಚಾರಣಕ್ಕೆ ಸಜ್ಜಾದೆವು ನಮ್ಮ ಗೈಡ್ ಮೊದಲೇ ಹೇಳಿದರು ಇದು ಸುಮಾರು 7 ಕಿ.ಮೀ ಇರಬಹುದು ಎಂದು. ನಮ್ಮ ಜೊತೆಯಲ್ಲಿದ್ದವರು ಬಹುತೇಕ ಛಾಯಾಚಿತ್ರಕಾರರೆ ಎಲ್ಲರೂ ತಮ್ತಮ್ಮ ಕ್ಯಾಮರಾಗಳನ್ನು ಹೆಗಲಿಗೇರಿಸಿ ಜೊತೆಗೆ ನೀರಿನ ಸೀಸೆ ತಿನ್ನಲು ಸ್ವಲ್ಪ ತಿಂಡಿ ಎಲ್ಲವನ್ನು ಬ್ಯಾಗಿಗೆ ತುಂಬಿಕೊಂಡು ಗೈಡ್ ನಡೆದ ದಾರಿಯನ್ನೇ ಹಿಂಬಾಲಿಸಿದೆವು. ಎತ್ತರೆತ್ತರದ ಮರಗಳು, ಬಿಸಿಲಿನಲ್ಲಿ ಸೂರ್ಯನ ಕಿರಣವೇ ನೆಲಕ್ಕೆ ಬೀಳದಷ್ಟು ಒತ್ತೊತ್ತಾಗಿ ಬೆಳೆದಿದ್ದ ಮರಗಳ ಛಾವಣಿ ಕೆಳಗೆ ನಡೆದು ಹೊಗುತ್ತಿದ್ದದ್ದು ನನಗೆ ಹಸಿರು ಕಾನನದ ಗುಹೆಯೊಳ ಹೊಕ್ಕಂತೆ ಭಾಸವಾಗುತ್ತಿತ್ತು.



ದಾರಿಯುದ್ದಕ್ಕೂ ಸಿಗುವ ಕೀಟ, ಹುಳ-ಹುಪ್ಪಟೆ, ಕಪ್ಪೆ ಮೊದಲಾದವುಗಳನ್ನ ಹುಡುಕುತ್ತಾ ಫೋಟೋ ತೆಗೆಯುತ್ತಾ ಸುಮಾರು ದೂರ ಹೊರಟ ನಮಗೆ ಕಾಲಿಗೆ ಹತ್ತಿದ್ದ ಇಂಬಳಗಳ ಬಗ್ಗೆ ತಿಳಿಯಲೇ ಇಲ್ಲ, ದಾರಿಯಲ್ಲೇ ದಿಢೀರನೇ ನಿಂತ ಸೋಮಾ "ಅಣ್ಣಾ ಏನೋ ಕಾಲಾಗ ತಣ್ಣಗ್ ಆಗ್ತಾ ಅದೇ" ಎಂದು ಕಾಲಿನ ಚಪ್ಪಲಿ ಬಿಚ್ಚಿದರೆ ಆಶ್ಚರ್ಯ, ಕಾಲೆಲ್ಲಾ ರಕ್ತ. ಅಲ್ಲೇ ಎಲ್ಲರೂ ನಿಂತು ತಮ್ ತಮ್ಮ ಕಾಲುಗಳನ್ನ ಪರೀಕ್ಷಿಸಿಕೊಳ್ಳಲಾರಂಭಿಸಿದೆವು. ಎಲ್ಲರ ಕಾಲುಗಳಲ್ಲೂ ನಾಲ್ಕೈದು ಇಂಬಳಗಳು ಅಂಟಿಕೊಂಡು ರಕ್ತ ಹೀರುತ್ತಿದ್ದವು, ಆಗ "ಅಯ್ಯೋ ಇದಲ್ಲಾ ಇದ್ದದ್ದೆ ಬನ್ನಿ ಬನ್ನಿ" ಎನ್ನುತ್ತಾ ವಿಪಿನ್ ಮುಂದೆ ಸಾಗಿದರೆ ಉಳಿದವರೆಲ್ಲಾ ಅವರನ್ನೇ ಹಿಂಬಾಲಿಸಿದೆವು. ದಾರಿಯುದ್ದಕ್ಕೂ ದಟ್ಟವಾದ ಕಾಡು ಆದರೆ ನಡುವೆ ಅಲ್ಲಲ್ಲಿ ತೆರೆದ ಬಯಲುಗಳು ಆಕರ್ಷಕವಾಗಿದ್ದವು ಹೀಗೆ ಸುಮಾರು ಮೂರ್ನಾಲ್ಕು ಬಯಲುಗಳು ನಮಗೆ ಸಿಕ್ಕಿದ್ದವು ಅದರಲ್ಲಿ ಕೊನೆಯ

ಬಯಲಲ್ಲಿ ಮರದ ಮೇಲಿಂದ ಯಾವುದೋ ಚಿಟ್ಟೆ ಹಾರಿ ಬಂದು ದಾರಿಯ ಪಕ್ಕದ ಚಿಕ್ಕ ಪೊದೆಯ ಮೇಲೆ ಕುಳಿತಿತು, ನೋಡಲು ಹಳದಿ ಬಿಳಿ ಬಣ್ಣದ ಈ ಚಿಟ್ಟೆಯ ರೆಕ್ಕೆ ಮುಂಭಾಗದಲ್ಲಿ ಕಿತ್ತಳೆ ಬಣ್ಣವಿತ್ತು ಕೈಲಿದ್ದ ಕ್ಯಾಮರಾದಲ್ಲಿ ಫೋಟೊ ಒಂದನ್ನು ಕ್ಲಿಕ್ಕಿಸಿ ಪಕ್ಕದಲ್ಲಿದ್ದ ಅಶ್ವಥ್ಥಣ್ಣನಿಗೆ ತೋರಿಸಿದೆ "ಓ ಇದಾ ಗ್ರೇಟ್ ಆರಂಜ್ ಟಿಪ್" ಎಂದು ಮುಂದೆ ಸಾಗಿದರು. ನಂತರ ಬ್ಯಾಗಿನಲ್ಲಿದ್ದ ಚಿಟ್ಟೆ ಪುಸ್ತಕ ತೆರೆದು ನೋಡಿದೆ ಈ ಚಿಟ್ಟೆ ಹೆಸರು "ದೊಡ್ಡ ಕಿತ್ತಳೆ ತುದಿ" GREAT ORANGE TIP" ಎಂದು.



ಪೈರೀಡಿಯಾ ಕುಟುಂಬಕ್ಕೆ ಸೇರಿರುವ ಈ ಚಿಟ್ಟೆ ಹಳದಿ ಮತ್ತು ಬಿಳಿ ಚಿಟ್ಟೆಗಳ ಗುಂಪಿಗೆ ಸೇರುತ್ತದೆ. ದಕ್ಷಿಣ ಏಷ್ಯಾ, ದಕ್ಷಿಣ ಚೀನಾ ಹಾಗೂ ಜಪಾನ್ ದೇಶಗಳಲ್ಲಿ ಕಾಣಸಿಗುತ್ತವೆ. ಹೆಚ್ಚಾಗಿ ಸಮತಟ್ಟು ಪ್ರದೇಶ, ಎಲೆ ಉದುರುವ ಕಾಡುಗಳು, ಕುರುಚಲು ಹಾಗೂ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಕಾಣಸಿಗುತ್ತವೆ. ಸುಮಾರು 80-100 ಮಿ.ಮೀ. ಉದ್ದದ ರೆಕ್ಕೆ ಹೊಂದಿದೆ, ಮೇಲಿನ ರೆಕ್ಕೆಯ ಮೇಲ್ಭಾಗದಲ್ಲಿ ಕಿತ್ತಳೆ ಬಣ್ಣವು ಕಪ್ಪು ಬಣ್ಣದಿಂದ ಆವರಿಸಿದೆ ಹಾಗೂ ಕಿತ್ತಳೆ ತುದಿಯಲ್ಲಿ ಕಪ್ಪು ಚುಕ್ಕೆಗಳ ಸಾಲಿರುತ್ತದೆ. ಹೆಣ್ಣು ಚಿಟ್ಟೆಯಲ್ಲಿ ಕೆಳಗಿನ ರೆಕ್ಕೆಗಳ ಅಂಚಿನಲ್ಲಿ ಕಪ್ಪು ಮಚ್ಚೆಗಳಿದ್ದು, ಗಂಡು ಚಿಟ್ಟೆಗಳಲ್ಲಿ ಈ ಕಪ್ಪು ಮಚ್ಚೆಗಳಿರುವುದಿಲ್ಲ.

ವೇಗವಾಗಿ ಹಾರಾಡುವ ಎತ್ತರದಮರಗಳಲ್ಲಿ ಹಾರಾಡುವ ಈ ಚಿಟ್ಟೆಗಳು ತೇವಾಂಶವಿರುವ ಮಣ್ಣಿಗೆ ಬರುತ್ತವೆ. ಮಣ್ಣಿನ ಮೇಲೆ ಕುಳಿತಾಗ ಚಿಟ್ಟೆಗಳು ರೆಕ್ಕೆಯನ್ನ ಮಡಚಿ ಕೂರುವುದರಿಂದ ಈ ಚಿಟ್ಟೆಯನ್ನ ಪತ್ತೆ ಹಚ್ಚುವುದು ಕಷ್ಟವಾಗಬಹುದು. ಹೀಗೇ ಇನ್ನು ಹಲವಾರು ಚಿಟ್ಟೆಗಳನ್ನ ಗುರಿತಿಸುತ್ತಾ ಅವುಗಳ ಫೋಟೋ ಕ್ಲಿಕ್ಕಿಸುತ್ತಾ ಸಾಗುತ್ತಿದ್ದ ನಮಗೆ ಸಮಯ ಕಳೆದಿದ್ದೇ ಗೊತ್ತಾಗಲಿಲ್ಲ, ಸುತ್ತಲೂ ಕತ್ತಲು ಆವರಿಸಿತ್ತು ಎಲ್ಲರೂ ಕ್ಯಾಂಪಿನತ್ತ ಹೆಜ್ಜೆ ಹಾಕಲಾರಂಭಿಸಿದೆವು. ಹೊಟ್ಟೆ ತಾಳಾ ಹಾಕುತ್ತಿತ್ತು ಕೈಕಾಲು ಸೋತಿದ್ದವು ಊಟ ಮಾಡಿ ಮಲಗಿದ್ದೇ ನಿದ್ದೇ ಬಂದದ್ದೂ ನೆನಪಿಲ್ಲ.

- ಮಹದೇವ .ಕೆ .ಸಿ

ಬೆಂಗಳೂರು.






# ಪಾತಾಳಗಂಗೆಯ ಪಳೆಯುಳಿಕೆ ನೀರು ಮತ್ತು ಮಾಲಿನ್ಯ

ಭೂಮಿಯ ಮೇಲಿನ ಕೋಟ್ಯಂತರ ಜನರಿಗೆ ಅಂತರ್ಜಲವೇ ಕುಡಿಯುವ ನೀರಿನ ಮೂಲ.

ಪ್ರಪಂಚದ 40% ವ್ಯವಸಾಯ ಅಂತರ್ಜಲವನ್ನೇ ಅವಲಂಬಿಸಿದೆ. ಹೀಗಿರುವಾಗ ಹರಿಯುವ ನದಿಗಳು ಕಲುಷಿತಗೊಂಡರೆ ನಮಗೇನಂತೆ! ಕೆರೆ - ಕುಂಟೆಗಳು ಕೊಳಚೆ ತುಂಬಿ ಗಬ್ಬು ನಾರಲಿ ಬಿಡಿ. ಕೆರೆಗೆ ಬೆಂಕಿ ಬೀಳಲಿ ಬಿಡಿ ! ನಮಗೆ ಭೂಮಿಯ ಅಂತರಾಳದಲ್ಲಿ ಶುದ್ಧ ನೀರು ಇದೆಯಲ್ಲಾ. ಎಂದು ಬೀಗುವ ನಮಗೆ ಇಲ್ಲಿದೆ ಒಂದು ಆತಂಕಕಾರಿ ಎಚ್ಚರಿಕೆ.

ಕೆನಡದ ಜಲತಜ್ಞ ಸ್ಕಾಟ್ ಝುಸೆಕೋ ಮತ್ತು ಅವರ ತಂಡ ಪ್ರಪಂಚದ ಎಲ್ಲಾ ಭಾಗಗಳಿಂದ 6455 ಕೊಳವೆ ಬಾವಿಗಳ ನೀರನ್ನು ಸಂಗ್ರಹಿಸಿದರು. ಆ ಸಂಗ್ರಹಿಸಿದ ನೀರಿನಲ್ಲಿ ಕರಗಿರುವ ಇಂಗಾಲದ ಪರಮಾಣುಗಳನ್ನು ಕಾರ್ಬನ್ ಡೇಟಿಂಗ್ ವಿಧಾನದಿಂದ ಈ ನೀರು ಎಷ್ಟು ವರ್ಷದ ಹಿಂದೆ ಸಂಗ್ರಹಗೊಂಡಿರಬಹುದು? ಎಂದು ಲೆಕ್ಕಾಚಾರ ಹಾಕಲು ಮುಂದಾದರು. ಆಗಲೇ ಅವರಿಗೆ ತಿಳಿದಿದ್ದು ಭೂಮಿಯ 750 ಅಡಿ ಆಳದಲ್ಲಿ ದೊರೆಯುವ ಎಲ್ಲಾ ನೀರು ಸರಿ ಸುಮಾರು 12000 ವರ್ಷ ಹಳೆಯದೆಂದು!. ಅಂದರೆ ಮಾನವರಾದ ನಾವು ಇನ್ನೂ ಬೇಸಾಯವನ್ನು ಕಲಿಯದೇ ಗೆಡ್ಡೆ ಗೆಣಸು ತಿನ್ನುತ್ತಾ ಅಲೆಯುತ್ತಿದ್ದ ಕಾಲದಲ್ಲಿ ಮಣ್ಣಿನಲ್ಲಿ ಹಿಂಗಿದ ನೀರನ್ನು ನಾವು ಇಂದು ಬಳಸುತ್ತಿದ್ದೇವೆ.




ಈ 12000 ವರ್ಷ ಹಳೆಯ ಫಾಸಿಲ್ ನೀರಿನ ಅಧ್ಯಾಯನದಲ್ಲಿ ತೊಡಗಿದ್ದ ತಂಡಕ್ಕೆ ಮತ್ತೊಂದು ಅಚ್ಚರಿ ಕಾದಿತ್ತು.! ಭೂಮಿಯ ಮೇಲೆ ಬಿದ್ದ ನೀರು ಸ್ವಲ್ಪ ಭಾಗ ಹರಿದು ಹೊಳೆ, ನದಿ, ಸಮುದ್ರ ಸೇರಿದರೆ, ಉಳಿದರ್ಧ ಭಾಗ ಮಣ್ಣಿನಲ್ಲಿ ಹಿಂಗಿ ಅಂರ್ಜಲವಾಗುವುದು ಸರಳ ಸಂಗತಿ. ಸಾಮಾನ್ಯವಾಗಿ ಕೊಳವೆ ಬಾವಿಯ ನೀರು ಮಾಲಿನ್ಯರಹಿತವಾಗಿರುತ್ತದೆ ಎಂದು ನಂಬಿಕೆ. ಆದರೆ ಭೂಮಿಯ ಪದರದಲ್ಲಿ ದೊರೆಯುವ ಈ ಫಾಸಿಲ್ ನೀರಿನಲ್ಲಿ ಗಮನಾರ್ಹ ಪ್ರಮಾಣದಲ್ಲಿ ಟ್ರೈಷಿಯಂ ಎಂಬ ಹೈಡ್ರೊಜನ್ನಿನ ಐಸೋಟೋಪು

ದೊರೆತಿದೆ. ಇದು ಅಣುಬಾಂಬಿನ ಪ್ರಯೋಗದಲ್ಲಿ ಉತ್ಪತ್ತಿಯಾಗುವ ಉಪ ಉತ್ಪನ್ನ. ಇದು ಅಪಾಯಕಾರಿ ಪ್ರಮಾಣದಲ್ಲಿ ನೀರಿನಲ್ಲಿ ಇಲ್ಲದೇ ಇದ್ದರೂ ಅಂತರ್ಜಲವನ್ನೇ ನಂಬಿ ಬದುಕುತ್ತಿರುವ ನಮ್ಮೆಲ್ಲರಿಗೂ ಎಚ್ಚರಿಕೆ ಘಂಟೆಯಾಗಿದೆ. 20ನೇ ಶತಮಾನದಲ್ಲಿ ಭೂಮಿಯ ಅಂತರಾಳದಲ್ಲಿ ನಾವು ನಡೆಸಿದ ಅಣುಬಾಂಬ್ ಪ್ರಯೋಗಗಳ ಪರಿಣಾಮವೇ ಇದು ಎಂದು ಜಲತಜ್ಞರು ಪ್ರತಿಪಾದಿಸಿದ್ದಾರೆ.

ಭೂತಾಳದಲ್ಲಿ ಸಾವಿರಾರು ವರ್ಷ ಹಳೆಯ ನೀರು ಕೂಡ ನಾವು ಉತ್ಪಾದಿಸಿರುವ ಈ ನವ ಮಾಲಿನ್ಯಕಾರಕಗಳಿಂದ ಮುಕ್ತವಾಗಿಲ್ಲ ಎಂಬುದು ದುಃಖಕರ ಸಂಗತಿ. ನಾಡಿನ ಶಕ್ತಿಸೌಧದಲ್ಲಿ *ಪಾತಾಳಗಂಗೆ ಯೋಜನೆ* ಸದ್ದು ಮಾಡುತ್ತಿರುವ ಈ ಹೊತ್ತಿನಲ್ಲಿ 750 ಅಡಿ ಆಳದಲ್ಲಿ ದೊರೆಯುವ ಅಂತರ್ ಗಂಗೆಯೇ ಕಲುಷಿತಗೊಂಡಿದೆ ಎಂಬ ಈ ವಿದ್ಯಮಾನವನ್ನು ವಿಜ್ಞಾನಿಗಳು ಕಂಡುಹಿಡಿದಿರುವುದು ಹೈಸೋಜಿಗ!.



ಪದಾ-ಪದ

***ಟ್ರೈಷಿಯಂ:*** ಹೈಡ್ರೋಜನ್ನಿನ ಐಸೋಟೋಪು. ಇದರ ನೂಕ್ಲಿಯಸ್ ನಲ್ಲಿ ಒಂದು ಪ್ರೋಟಾನ್ ಜೊತೆಗೆ ಎರಡು ನ್ಯೂಟ್ರಾನ್ ಇರುತ್ತದೆ.

**ಐಸೋಟೋಪು:** ಒಂದು ಧಾತುವಿನ ಪರಮಾಣುಗಳಲ್ಲಿ ಪ್ರೋಟಾನ್ ಸಂಖ್ಯೆ ಒಂದೇ ಇದ್ದು, ನ್ಯೂಟ್ರಾನ್ ಸಂಖ್ಯೆ ಬೇರೆ ಬೇರೆ ಇದ್ದರೆ ಅದನ್ನು ಐಸೋಟೋಪು ಎನ್ನುವರು.

**- ಶಂಕರಪ್ಪ .ಕೆ .ಪಿ**

**ಬೆಂಗಳೂರು.**





# ಅರುಣನ ಹಿರಿಮೆ

ಮೂಡಣದ ನೇಸರನ
ಸೊಬಗಿಗೆ ಕಳೆ ಏರಿತೇ...
ಹಾ...ಸುಮವಾಯಿತೇ...
ಸೊಗಸಾಯಿತೇ...

ಕತ್ತಲನು ಕನವರಿಸಿ
ಕುಂದಿರುವ ಗುಣವಳಿಸಿ
ಕಾರ್ಮೋಡವನೇ ಸರಿಸಿ
ಕನಸ ನನಸಾಗಿಸುವ...
ಕರೆ ನೀನು ಸವಿತಾ.

ಹೇ..ಉದಿಸುವ ಅರುಣ
ಹೇಗೆ ತೀರಿಸಲಣ್ಣ
ನಿನ್ನಯ ಋಣ
ನಿನ್ನ ಕರುಣೆಯೇ ವರುಣ
ಧರಣಿದೇವಿಗಾಭರಣ..

ಹೊತ್ತು ಮುಳುಗಲು ನೀನೆ
ಹೊತ್ತು ಸಾಗುವೆ ನೀನು
ಹೊತ್ತು ತುತ್ತಿನ ಗುರಿಗೆ
ಹೊರುವಂತ ಮಹನೀಯ

ಗುರುವೆಲ್ಲಗೂ ಹಿರಿಯ
ಗುರುತಿಸಲು ಒಡೆಯ
ಗುಡಿಯ ಒಳಗಿನ
ಗುಮ್ಮನ ಓಡಿಸಲು
ಗುರಿತೋರೋ ಗೆಳೆಯ

ಹನಿಯಾಗಲು ನೀನೆ
ಹಣವಾಗಲು ನೀನೆ
ಹಸಿವಾಗಲು ನೀನೆ
ಹರಿವ ತೊರೆಯಾಗಲು
ಹಂದರವು ನೀನೆ...

ಮುದವು ಮೂಡಣ
ಮುಪ್ಪು ಪಡುವಣ
ಮುದದ ಮುಪ್ಪಿನ
ಮುಂದುಭಾಗವೇ
ಮುಂಜಾವಿನ ತೋರಣ

ನೇಸರನ ಉಸಿರ
ನೆಚ್ಚಿಕೊಳ್ಳುತ
ನೇತಾರರಾಗಿ
ನೇತೃತ್ವ ವಹಿಸೇ
ನೇತ್ರವೆಲ್ಲವು ನೆನೆವವು..

- ನಂದಕುಮಾರ್ ಹೊಳ್ಳ.
ಉಡುಪಿ.

# ಪ್ರಕೃತಿ ಬಿಂಬ



© ಕಾರ್ತಿಕ್ .ಎ .ಕೆ                                                                 ವಾಲ್ಪರೈ , ತಮಿಳುನಾಡು.

ಎಲ್ಲಾ ಪ್ರಾಣಿಗಳಂತೆ ಮಾನವನೂ ಒಂದು ಪ್ರಾಣಿ ಎಂಬ ಸತ್ಯವನ್ನ ಮರೆತಿರುವ ನಾವು...! ನಮ್ಮ ಸುಖಕ್ಕಾಗಿ ಇನ್ನುಳಿದ ಪ್ರಾಣಿಗಳನ್ನು ಅವನತಿಯ ಹಂತಕ್ಕೆ ತಳ್ಳುವುದು ಎಷ್ಟರಮಟ್ಟಿಗೆ ನ್ಯಾಯ? ಸಿಂಹ-ಬಾಲದ ಕೋತಿಗಳು ಅವನತಿಯ ಬಾಗಿಲಿಗೆ ಬಂದು ತಲುಪಿರುವುದು! ನಮ್ಮಿಂದಲೇ ಅಲ್ಲವೇ?!.



© ಕಾರ್ತಿಕ್ .ಎ .ಕೆ ನಾಗರಹೊಳೆ ಅಭಯಾರಣ್ಯ

ಆಹಾರ ಚಕ್ರದಲ್ಲಿ ಇವೆಲ್ಲಾ ಸಹಜ, ಆದರೆ ನಮ್ಮಂತಾ ಪ್ರಾಣಿಗಳು ಬೇಟೆಯನ್ನೇ ಕಸುಬಾಗಿಸಿಕೊಂಡಿರುವುದು ವಿಪರ್ಯಾಸ ಅಲ್ಲವೇ...! ಮಾನವನ ಚಪಲಕ್ಕೆ ತುತ್ತಾದ ಅದೆಷ್ಟೋ ಪ್ರಾಣಿಗಳು ಇಂದು ಈ ಭೂಮಿಯಿಂದ ಶಾಶ್ವತವಾಗಿ ಮಾಯವಾಗಿ ಹೋಗಿವೆ...!



© ಕಾರ್ತಿಕ್ .ಎ .ಕೆ ಅಂಬೋಲಿ , ಮಹಾರಾಷ್ಟ್ರ

ನನ್ನನ್ನ ಮೀನು ಎಂದು ಕೊಂಡವರಿಗೆ ಇನ್ನು ಕೆಲವೇ ದಿನಗಳಲ್ಲಿ ನಾನ್ಯಾರು ಎಂದು ತೋರಿಸುತ್ತೇನೆ...!, ನಿಮ್ಮಲ್ಲಿ ನನ್ನನ್ನು ಮೀನು ಎಂದುಕೊಂಡವರು ತುಂಬ ಜನ ಇದ್ದೀರಿ...! ನನಗೆ ಗೊತ್ತು.



© ಕಾರ್ತಿಕ್ .ಎ .ಕೆ                                                                 ಕೊಡಗು.

ಸುಂದರವಾದ ಹೂವಿನ ತೋಟದಲ್ಲಿ ರುಚಿ ರುಚಿಯಾದ ಮಕರಂದ ಸವಿಯಲು ಬಂದ ದುಂಬಿಯ ಜೀವ ಕಾಲಚಕ್ರದಲ್ಲಿ ಒಮ್ಮೆಯಾದರು ಹೂವಿನೊಳಗೆ ಅವಿತಿರುವ ಜೇಡನಿಗೆ ಬಲಿಯಾಗುವುದು ಪ್ರಕೃತಿಯ ನಿಯಮ.